# 6

# ಯೇಸುವಿನ ದೀಕ್ಷಾಸ್ನಾನ

## (3:13-17)

ಯೇಸು ಹೊಂದಿದ ದೀಕ್ಷಾಸ್ನಾನವು ಅರ್ಥಮಾಡಿಕೊಳ್ಳುವದು ಅನೇಕ ಜನರಿಗೆ ಬಹಳ ಕಷ್ಟಕರವಾಗಿದೆ. ಯೇಸುವಿಗೆ ಕ್ಷಮಾಪಣೆ ಅವಶ್ಯಕತೆ ಇರಲಿಲ್ಲ. ಯೇಸು ದೀಕ್ಷಾಸ್ನಾನ ತೆಗೆದುಕೊಂಡು "ಎಲ್ಲಾ ನೀತಿಯ ಕಾರ್ಯಗಳು ನೆರವೇರಿಸಿದರಿಂದ" ಈ ವಾಕ್ಯಭಾಗವು ಬಹಳ ಬಲಶಾಲಿಯಾಗಿದೆ.

## ದೈವಿಕ ನಿರ್ಧಾರ (3:13, 14)

**13ಆ ಕಾಲದಲ್ಲಿ ಯೇಸು ಯೋಹಾನನಿಂದ ಸ್ನಾನ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೊರ್ದನ್ ಹೊಳೆಗೆ ಬಂದನು. 14ಆಗ ಯೋಹಾನನು - ನಾನು ನಿನ್ನಿಂದ ಸ್ನಾನಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು ಎಂದು ಹೇಳಿ ಆತನನ್ನು ತಡೆಯುತ್ತಾ ಇದ್ದನು.**

**ವಚನ 13.** ಯೇಸು ತನ್ನ ಸಾರ್ವಜನಿಕ ಜೀವನ ಪ್ರವೇಶಿಸಲು ಸಿದ್ಧವಾಗಿರುತ್ತಿದ್ದಂತೆ, ಸ್ನಾನಿಕನಾದ **ಯೋಹಾನ**ನನ್ನು ದೀಕ್ಷಾಸ್ನಾನ ಕೊಡಬೇಕೆಂದು ಮನವಿಮಾಡುತ್ತಾ **ಯೇಸು**, ಯೋಹಾನನ ಹತ್ತಿರ ಹೋಗುವ ಮುಖಾಂತರ ತನ್ನ ಸೇವೆ ಪ್ರಾರಂಭಮಾಡಿದನು. ಯೋಹಾನನ ಸೇವೆಯ ಪ್ರಾರಂಭದಲ್ಲಿ ಬಳಸಿದ **ಬಂದನು** ಎಂದು ಭಾಷಾಂತರಿಸಿದ ಕ್ರಿಯಾಪದವು "ಆಗಮನ" ಎಂಬ ಅದೇ ಕ್ರಿಯಾಪದದಿಂದ ಭಾಷಾಂತರಿಸಲಾಗಿದೆ (3:1). ಯೇಸು ಯೋಹಾನನ ಬಳಿಗೆ ಬಂದಿರುವದರ ಕುರಿತಾಗಿ, "ಈಗ ಸುವಾರ್ತೆಯ ಮುಖ್ಯ ವ್ಯಕ್ತಿ ವೇದಿಕೆಯ ಮೇಲೆ ಪ್ರವೇಶಿಸಿದ್ದಾನೆಂದು"[1] Donald A. Hagner ರವರು ಹೇಳಿದ್ದಾರೆ.

ಮತ್ತಾಯನ ಸುವಾರ್ತೆಯಲ್ಲಿ, ಯೇಸು ನಜರೇತಿಗೆ ಮಗುವಿರುವಾಗ ತೆಗೆದುಕೊಂಡು ಹೋಗಿದ್ದಂದಿನಿಂದ (2:23) ಮತ್ತು ಆತನ ದೀಕ್ಷಾಸ್ನಾನ ತೆಗೆದುಕೊಳ್ಳುವ ಮಧ್ಯಕಾಲದವರೆಗೂ ಆಗಿರುವ ವಿಷಯಗಳ ಕುರಿತು ಪ್ರಸ್ತಾಪಿಸಿಲ್ಲ. ಯೇಸು ಈ ಸಮಯದಲ್ಲಿ ಸುಮಾರು ಮೂವತ್ತು ವರ್ಷದನಾಗಿದ್ದನು ಎಂಬ ಮಾಹಿತಿ ನಮಗೆ ಲೂಕ 3:23 ತಿಳಿಸುತ್ತದೆ. ಆತನು **ಗಲಿಲಾಯದಲ್ಲಿರುವ** ನಜರೇತಿನಿಂದ (ಮಾರ್ಕ 1:9) ಯೋಹಾನನು ದೀಕ್ಷಾಸ್ನಾನ ಕೊಡುವ **ಯೋರ್ದಾನ** ನದಿಯ ಆಚೆಯಿರುವ "ಬೇಥಾನ್ಯ" ವರೆಗೆ (ಯೋಹಾನ 1:28), ಆತನಿಂದ **ದೀಕ್ಷಾಸ್ನಾನ ಹೊಂದಲು** ಪ್ರಯಾಣಿಸಿದನು.

**ವಚನ 14.** ಯೇಸು **ಯೋಹಾನ**ನಲ್ಲಿಗೆ ಬಂದಾಗ ಪ್ರವಾದಿಯು ಈತನೇ ಮೆಸ್ಸೀಯನೆಂದು ತಿಳಿದುಕೊಂಡನು. ಇವರಿಬ್ಬರೂ ವಯಸ್ಸಿನಲ್ಲಿ ಆರು ತಿಂಗಳು ಹೆಚ್ಚು ಕಡಿಮೆಯುಳ್ಳವರಾಗಿದ್ದರು, ಅವರು ಸಂಬಂಧಿಕರಾಗಿದ್ದರು (ಲೂಕ 1:36). ಇವರಿಬ್ಬರು ಒಂದಾಗಿ ಬೆಳೆಯುತ್ತಾ ಒಬ್ಬರಿಗೊಬ್ಬರು ನೋಡಿಕೊಳ್ಳುತ್ತಾ ಬೆಳೆದ ವಿಷಯವು ಊಹಿಸಿಕೊಳ್ಳುವಂತದ್ದಾಗಿದೆ. ಅವರು ಚಿಕ್ಕವರಾಗಿರುವಾಗ ಯೆರೂಸಲೇಮಿನಲ್ಲಿ ನಡೆಯುತ್ತಿರುವ ಪಸ್ಕಹಬ್ಬದ ಸಂದರ್ಭದಲ್ಲಿ ಅವರು ಭೇಟಿಯಾಗಿದ್ದಿರಬಹುದು (ನೋಡಿರಿ ಲೂಕ 2:41, 42). ಹಾಗಿದ್ದರೂ, ಅವರಿಬ್ಬರು ಒಂದು ವೇಳೆ ಎಂದಿಗೂ ಭೇಟಿಯಾಗದೆ ಇದ್ದಿರಬಹುದು ಅಥವಾ ಒಬ್ಬರಿಗೊಬ್ಬರು ಸ್ವಲ್ಪ ಕಾಲ ನೋಡದೆ ಇದ್ದಿರಬಹುದು. ಬಹುಶಃ ಯೋಹಾನನು ಅನೇಕ ವರ್ಷಗಳ ಕಾಲ ಅರಣ್ಯದಲ್ಲಿ

ಏಕಾಂತವಾಗಿ ಇದ್ದಿರುವ ಸಾಧ್ಯತೆ ಇದೆ (ಲೂಕ 1:80).

ಮೊದಲು, ಯೇಸುವಿಗೆ ದೀಕ್ಷಾಸ್ನಾನ ಕೊಡಲು ಯೋಹಾನನು ಸಂಕೋಚಪಟ್ಟನು. **ನಾನು ನಿನ್ನಿಂದ ಸ್ನಾನ ಮಾಡಿಸಿಕೊಳ್ಳ ತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು?** ಎಂದು ಯೋಹಾನನು ಹೇಳಿದನು. ಗ್ರೀಕ್ ವಾಕ್ಯಭಾಗದಲ್ಲಿ, ಯೋಹಾನನ ಪ್ರಶ್ನೆ ಮಹತ್ವ ಪೂರ್ಣವಾದದ್ದಾಗಿದೆ. "ನಾನು ನಿನ್ನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳತಕ್ಕವನಾಗಿದ್ದೇನೆ ಮತ್ತು ನೀನು ನನ್ನ ಬಳಿಗೆ ಬರುವುದೇನು?" ಎಂದು ಅಕ್ಷರಾರ್ಥ ಅನುವಾದ ಇರಬಹುದು. ಯೋಹಾನನು ಯೇಸುವಿಗೆ ದೀಕ್ಷಾಸ್ನಾನ ಮಾಡಿಸಲು ವ್ಯಕ್ತಪಡಿಸಿದ ಅಸಮ್ಮತಿಯ ವಿಷಯ ಮತ್ತಾಯನು ಮಾತ್ರ ತನ್ನ ಸುವಾರ್ತೆಯಲ್ಲಿ ದಾಖಲಿಸಿದ್ದಾನೆ. Douglas R. A. Hare ರವರು ಹೀಗೆ ವ್ಯಾಖ್ಯಾನಿಸಿದ್ದಾರೆ, "ಬಹುಶಃ ಯೋಹಾನನ ಕೈಯಿಂದ ದೀಕ್ಷಾಸ್ನಾನ ಹೊಂದಲು ಯೇಸು ಆತನ ಬಳಿಗೆ ಬಂದು ಆತನ ಎದರು ತಲೆ ಬೊಗ್ಗಿಸಿದಕ್ಕೆ ಯೇಸು ಯೋಹಾನನಿಗಿಂತಲು ಕಡಿಮೆಯುಳ್ಳವನು ಎಂದು ತಿಳಿದು ಯೋಹಾನನ ಹಿಂಬಾಲಕರು ಸ್ನಾನಿಕನಾದ ಯೋಹಾನನು ಹಿಂಬಾಲಿಸಿರಬಹುದು ಎಂಬ ವಿಷಯವನ್ನು ಮತ್ತಾಯನು ಹೇಳುತ್ತಿದ್ದಾನೆ."[2] ಇದರ ಫಲಿತಾಂಶವಾಗಿ, ಆತನು ಯೋಹಾನನ ಈ ಮಾತುಗಳನ್ನು ತೆಗೆದುಕೊಂಡು ಈ ತಪ್ಪಾದ ಅಭಿಪ್ರಾಯವನ್ನು ಸರಿಪಡಿಸಿದನು. ಈ ಸಲಹೆ ಉತ್ತಮವಾಗಿ ತೋರುತ್ತದೆ, ಮತ್ತಾಯನು ಈ ಸುವಾರ್ತೆಯ ಬರೆದಿರುವ ಸಮಯದಲ್ಲಿ (ನೋಡಿರಿ ಅಪೊಸ್ತಲರ ಕೃತ್ಯಗಳು 19:1-7) ಮೊದಲನೆ ಶತಮಾನದ ಮಧ್ಯಕಾಲದವರೆಗೆ ಯೋಹಾನನಿಗೆ ಶಿಷ್ಯಂದಿರಿದ್ದರು. ಇನ್ನು ಹೆಚ್ಚಾಗಿ, ಸ್ನಾನಿಕನಾದ ಯೋಹಾನನಿಗಿಂತ ಯೇಸು ಬಹಳ ಕೀಳಾದವನು ಎನ್ನುವ ಬಲವಾದ ತಪ್ಪಭಿಪ್ರಾಯ ಇಂದಿಗೂ ಮೆನ್‌ಡೇನಿಯನ್ (ಪ್ರಾಚೀನ ಬಾಬೇಲ್ ದೇಶದ ವಂಶಸ್ಥರು) ವರ್ಗದಲ್ಲಿ ಬಲವಾಗಿ ಇದೆ.[3]

## ದೈವಿಕ ಉದ್ದೇಶ (3:15)

**15ಆದರೆ ಯೇಸು ಅವನಿಗೆ - ಸದ್ಯಕ್ಕೆ ಒಪ್ಪಿಕೋ; ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು ಒಪ್ಪಿಕೊಂಡನು.**

**ವಚನ 15. ಸದ್ಯಕ್ಕೆ ಒಪ್ಪಿಕೋ; ಹೀಗೆ ನಾವು ಎಲ್ಲಾ ಧರ್ಮವನ್ನು ನೇರವೇರಿಸತಕ್ಕದ್ದಾಗಿದೆ** ಎಂದು ಯೇಸು ಯೋಹಾನನಿಗೆ ಉತ್ತರಕೊಟ್ಟನು. ಮೊದಲೆ ತಿಳಿಸಿದಂತೆ, ಯೋಹಾನನು "ಪಾಪಗಳ ಪರಿಹಾರಕ್ಕಾಗಿ" ದೀಕ್ಷಾಸ್ನಾನ ಮಾಡಿಸುತ್ತಿದ್ದನು (ಮಾರ್ಕ 1:4) - ಆದರೆ ಯೇಸು "ಪಾಪ ಅರಿತವನಲ್ಲ" (2 ಕೊರಿಂಥ 5:21; ನೋಡಿರಿ ಯೋಹಾನ 8:29; ಇಬ್ರಿಯ 4:15; 7:26; 1 ಪೇತ್ರ 2:21, 22; 1 ಯೋಹಾನ 3:5). ಆದರೂ, "ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ" ಕಾರಣನಾಗುವದಕ್ಕಾಗಿ (ಇಬ್ರಿಯ 5:9) ಯೇಸು ಸಂಪೂರ್ಣವಾಗಿ ದೇವರಿಗೆ ವಿಧೇಯನಾಗಬೇಕಾಗಿತ್ತು. "ಎಲ್ಲಾ ನೀತಿಯು ನೇರವೇರಿಸುವಂಥದ್ದಾಗಿದೆ" ಎಂಬ ವಾಕ್ಯದ ನಿಖರವಾದ ಅರ್ಥವು ಚರ್ಚಾಸ್ಪದವಾಗಿದೆ, ಯೇಸುವಿನ ದೀಕ್ಷಾಸ್ನಾನದಲ್ಲಿ ಯೇಸುವಿನ ಕುರಿತು ಕೆಲವು ನಿಜವಾದ ಅಂಶಗಳನ್ನು ಮುಂದೆ ಹೇಳಲಾಗಿದೆ:

1. ಆತನು ದೇವರ ಚಿತ್ತಕ್ಕೆ ವಿಧೇಯನಾದನು (21:25, 32; ಲೂಕ 7:29, 30).
2. ಆತನು ಯೋಹಾನನ ಸೇವೆಗೆ ಮತ್ತು ದೀಕ್ಷಾಸ್ನಾನಕ್ಕೆ ಅನುಮೋದನೆ ನೀಡಿದನು.
3. ಇತರರು ಹಿಂಬಾಲಿಸುವಂತೆ ಆತನು ಮಾದರಿಯಾದನು.

4. ಪಾಪಿಗಳೊಂದಿಗೆ ತನ್ನನ್ನು ದೀನತೆಯಿಂದ ಗುರುತಿಸಿಕೊಂಡನು.
5. ತನ್ನ ಮರಣದಲ್ಲಿ ಪಾಪಿಗಳನ್ನು ಬಿಡಿಸಿ ಕಾಪಾಡುವ ಉನ್ನತವಾದ ಸೇವೆಯನ್ನು ಪ್ರಾರಂಭಮಾಡಿದನು (ಯೆಶಾಯ 53:11; ಮತ್ತಾಯ 1:21).
6. ಆತನು ಯೋಹಾನನಿಗೆ ಮೆಸ್ಸೀಯನೆಂದು ಪ್ರಕಟಿಸಿ ಕೊಂಡನು, ಮತ್ತು ಯೋಹಾನನು ಆತನನ್ನು ಇಸ್ರಾಯೇಲರಿಗೆ ಪ್ರಕಟಿಸಿದನು (ಯೋಹಾನ 1:31, 32).

**ನಂತರ ಒಪ್ಪಿಕೊಂಡನು** ಎನ್ನುವುದು ಯೋಹಾನನು ಯೇಸುವಿನ ತಾರ್ಕಿಕತೆಯಿಂದ ಪ್ರೇರೇಪಣೆಗೊಂಡು, ಯೇಸುವಿಗೆ ದೀಕ್ಷಾಸ್ನಾನ ಕೊಟ್ಟನು ಎಂಬುದನ್ನು ಸೂಚಿಸುತ್ತದೆ.

## ದೈವಿಕ ಸಾಕ್ಷಿ (3:16, 17)

**16ಯೇಸು ಸ್ನಾನಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿತು; 17ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವದನ್ನು ಕಂಡನು. ಆಗ - ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು.**

**ವಚನ 16. ಯೇಸು ಸ್ನಾನಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬಂದನು.** ಈ ವಾಕ್ಯಭಾಗದಿಂದ ಆತನು ಸಂಪೂರ್ಣವಾಗಿ ಮುಳುಗಿಸಿಸಲ್ಪಟ್ಟನು, ಇದರರ್ಥ "ದೀಕ್ಷಾಸ್ನಾನ" ವಾಗಿದೆ (ನೋಡಿರಿ ಅಪೊಸ್ತಲರ ಕೃತ್ಯಗಳು 8:38, 39). ಆ ಸಮಯದಲ್ಲಿ, **ಆಕಾಶವು ತೆರೆಯಿತು.** ಈ ಭಾಷೆಯು ದೇವರ ಪ್ರಕಟಣೆಯ ತಿಳುವಳಿಕೆಗೆ ಒಂದು ಸಾಮಾನ್ಯ ಲಕ್ಷಣವಾಗಿದೆ (ಯೆಶಾಯ 64:1; ಯೆಹೆಜ್ಕೇಲ 1:1; ಯೋಹಾನ 1:51; ಅಪೊಸ್ತಲರ ಕೃತ್ಯಗಳು 7:56; 10:11; ಪ್ರಕಟನೆ 4:1). ಇದನ್ನು ಹಿಂಬಾಲಿಸಿದ ಆ ಘಟನೆಯು ದಾರ್ಶಿಣಿಕ ಅನುಭವವೋ ಅಥವಾ ನೈಸರ್ಗಿಕ ವಾಸ್ತವವೋ ಎನ್ನುವದು ಚರ್ಚಾಸ್ಪದವಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ ಪವಿತ್ರಾತ್ಮನು ಇಳಿದಾಗ ಮತ್ತು ದೇವರು ಮಾತಾಡುವಾಗ ಎಲ್ಲರೂ ಇದ್ದರೋ ಅಥವಾ ಯೇಸು ಮತ್ತು ಯೋಹಾನನು ಮಾತ್ರ ನೋಡಿದರೋ ಎನ್ನುವ ಪ್ರಶ್ನೆ ಇದೆ (ಯೋಹಾನ 5:37).

**ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವದನ್ನು ಕಂಡನು.** ಆತ್ಮವನ್ನು ಪಾರಿವಾಳಕ್ಕೆ ಹೋಲಿಸಿರುವದು ಆತ್ಮವು ಕೆಳಗಿಳಿದು ಬಂದಿರುವ ವಿಧಾನ ವರ್ಣಿಸಿರುವದನ್ನು ಅರ್ಥ ಮಾಡಿಕೊಳ್ಳಬೇಕು. ಹಾಗಿದ್ದರೂ, ಲೂಕನ ಹೋಲಿಕೆಯು ಭೌತಿಕವಾಗಿ ಕಾಣಿಸುವದಕ್ಕೆ ಸಂಬಂಧಿಸಿದ್ದಾಗಿದೆ: "ಪವಿತ್ರಾತ್ಮನು ದೇಹಾಕಾರವಾಗಿ ಪಾರಿವಾಳದ ಹಾಗೆ ಆತನ ಮೇಲೆ ಇಳಿದನು" (ಲೂಕ 3:22). ಪಾರಿವಾಳವು ಸಾದುತನಕ್ಕೆ ಮತ್ತು ನಿಷ್ಕಪಟ ತನಕ್ಕೆ ಗುರುತಾಗಿದೆ (10:16). ಅಷ್ಟು ಮಾತ್ರವಲ್ಲದೆ, ಆ ಕಾಲದಲ್ಲಿ ಯೆಹೂದ್ಯ ಮತದಲ್ಲಿ ಪವಿತ್ರಾತ್ಮನು ಪಾರಿವಾಳದೊಂದಿಗೆ ಸಂಬಂಧಿಸಿರುವ ವಿಷಯವಾಗಿದೆ. G. F. Hasel ಹೀಗೆ ವಿವರಿಸಿದ್ದಾರೆ,

> Rabbi Ben Zoma, ಎನ್ನುವವರು ಅಪೊಸ್ತಲರ ಸಮಕಾಲಿನ ಯುವಕನಾಗಿದ್ದನು, ಯೆಹೂದ್ಯ ಧರ್ಮ ಸಂಪ್ರದಾಯವನ್ನು ಹೇಳುತ್ತಿದ್ದಂತೆ, "ದೇವರಾತ್ಮವು ಜಲ ಸಮೂಹಗಳ ಮೇಲೆ ಚಲಿಸುತ್ತಿತ್ತು ಆದರೆ ಅವರನ್ನು ಮುಟ್ಟದೆ [ಆದಿಕಾಂಡ 1:2] ದೇವರ ಆತ್ಮ ಪಾರಿವಾಳದಂತೆ ಚಲಿಸುತ್ತಿತ್ತು" [Talmud *Hagigah* 15a].[4]

ಯೋಹಾನನು ಯಾರ ಮಾರ್ಗವನ್ನು ಸಿದ್ಧಪಡಿಸುತ್ತಿದ್ದಾನೋ ಆತನನ್ನು ಗುರುತಿಸುವುದಕ್ಕಾಗಿ ಈ ಪಾರಿವಾಳವು ಕೊಡಲ್ಪಟ್ಟಿದೆ. ಆದಾಗ್ಯೂ, ಯೇಸು ಮೆಸ್ಸೀಯನೆಂದು

ಯೋಹಾನಿಗೆ ಆಲೋಚನೆಯಿದ್ದರೂ ಸಹ - ಆತನಿಗೆ ದೀಕ್ಷಾಸ್ನಾನ ಮಾಡಿಸಲು ಸಂಕೋಚಪಟ್ಟಿರುವ ವಿಷಯ ವಿವರಿಸುತ್ತದೆ - ಆತನ ಮೇಲೆ ಆತ್ಮವು ಇಳಿದು ಬರುವವರೆಗೆ ನಿಶ್ಚಯವಾಗಿ ಆತನು *ತಿಳಿದುಕೊಂಡಿರಲಿಲ್ಲ* (ಯೋಹಾನ 1:29-34). ಯೇಸುವೇ ಕ್ರಿಸ್ತನೆಂದು ಪಾರಿವಾಳವು ಅನುಭವ ಪೂರ್ವಕವಾದ ರುಜುವಾತಾಗಿ ಕೆಲಸಮಾಡುತ್ತದೆ.

ಯೆಶಾಯನು ಹೇಳಿದ ಪ್ರವಾದನೆಯು ಕೂಡ ಈ ಘಟನೆಯು ನೆರವೇರಿಸಿದೆ: "ಆತನ ಮೇಲೆ ಯೆಹೋವನ ಆತ್ಮವೇ ನೆಲೆಗೊಂಡಿರುವದು" (ಯೆಶಾಯ 11:2); "ಇವನಲ್ಲಿ ನನ್ನ ಆತ್ಮವನ್ನು ಇರಿಸಿದ್ದೇನೆ" (ಯೆಶಾಯ 42:1); ಮತ್ತು "ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಇದೆ" (ಯೆಶಾಯ 61:1). ಕ್ರಿಸ್ತನು ದೇವರ ರಾಜ್ಯದ ಮೇಲೆ ರಾಜನಾಗಿರುವಂತೆ ಅಭಿಷೇಕಿಸಿದವನು ಪವಿತ್ರಾತ್ಮನು ಆಗಿದ್ದಾನೆ. ಇದು ಮಾತ್ರವಲ್ಲದೆ, ಯೇಸು ಈ ಸ್ಥಳದಿಂದ ಹೊರಟು ಹೋಗುವಾಗ, ಪವಿತ್ರಾತ್ಮನ ಬಲದೊಂದಿಗೆ ಮುಂದೆ ಹೋಗಿ ಎಲ್ಲಾ ತರಹದ ರೋಗಗಳನ್ನು ಸ್ವಸ್ಥಪಡಿಸುತ್ತಿದ್ದನು ಮತ್ತು ದೆವ್ವಗಳನ್ನು ಬಿಡಿಸುತ್ತಿದ್ದನು - ದೇವರ ರಾಜ್ಯಕ್ಕೆ ವಿರುದ್ಧವಾಗಿರುವ ಎಲ್ಲಾ ಸೈತಾನನ ಶಕ್ತಿಗಳನ್ನು ಹೊರಗೆ ಹೊರಡಿಸುತ್ತಿದ್ದನು (12:28; ಅಪೊಸ್ತಲರ ಕೃತ್ಯಗಳು 10:38).

**ವಚನ 17. ಈತನು ಪ್ರಿಯನಾಗಿರುವ ನನ್ನ ಮಗನು ಈತನನ್ನು ನಾನು ಮೆಚ್ಚಿದ್ದೇನೆ** ಎಂದು ತಂದೆ ಪ್ರಕಟಿಸಿದ್ದಾನೆ. ದೇವರು ತನ್ನ ಮಗನ ದೈವೀಕತ್ವವನ್ನು ಪ್ರಕಟಿಸಿದ ಮೂರು ಸಂದರ್ಭಗಳಲ್ಲಿ ಇದು ಮೊದಲನೆಯ ಸಾರಿಯಾಗಿದೆ (ನೋಡಿರಿ 17:5; ಯೋಹಾನ 12:28). ಈ ವಾಕ್ಯಗಳು ನೇರವಾಗಿ ಹಳೆ ಒಡಂಬಡಿಕೆಯ ವಾಕ್ಯಗಳಲ್ಲ, ಆದರೆ ಅವುಗಳು ಕೆಲವು ವಿಷಯಗಳನ್ನು ನೆನಪುಮಾಡುವಂಥವುಗಳಾಗಿವೆ. ಯೇಸು ದೈವಕುಮಾರನು, ದೇವರ ಅಭಿಷೇಕ ಇರುವಂಥವನು (ಕೀರ್ತನೆ 2:7; ನೋಡಿರಿ ಅಪೊಸ್ತಲರ ಕೃತ್ಯಗಳು 13:33; ಇಬ್ರಿಯ 1:5; 5:5). ದೇವರಿಗೆ ಪ್ರಿಯನಾಗಿದ್ದವನು ಮತ್ತು ಆತನಿಗೆ ಮೆಚ್ಚಿಕೆಯುಳ್ಳವನು - "ಇವನು ನನಗೆ ಇಷ್ಟನು, ನನ್ನ ಪ್ರಾಣ ಪ್ರಿಯನು" (ಯೆಶಾಯ 42:1). ಈ ಭಾಷೆಯು ಸಹ ಅಬ್ರಾಹಾಮನಿಗೆ ವಾಗ್ದಾನದ ಮಗನಾಗಿ ಕೊಟ್ಟಿರುವ ಇಸಾಕನನ್ನು ಬಲಿ ಅರ್ಪಿಸಿರುವ ವಿಷಯದ ರೀತಿಯಲ್ಲಿಯೇ ಇದು ಸಹ ವರ್ಣಿಸುತ್ತದೆ (ಆದಿಕಾಂಡ 22:2).

ಯೇಸುವಿನ ದೀಕ್ಷಾಸ್ನಾನದ ಸಮಯದಲ್ಲಿ ದೈವತ್ವದ[5] ಮೂರು ಸದಸ್ಯರು ಅಲ್ಲಿ ಕಾಣಿಸಿಕೊಂಡರು. ಕ್ರಿಸ್ತನು ಯೋಹಾನನೊಂದಿಗೆ ನೀರಿನಲ್ಲಿದ್ದನು. ಪವಿತ್ರಾತ್ಮನು ಪಾರಿವಾಳದ ರೂಪದಲ್ಲಿ ಇಳಿದನು ಮತ್ತು ಯೇಸುವಿನ ಮೇಲೆ ಬಂದನು. ಈ ಸಂಗತಿಗಳು ನಡೆಯುತ್ತಿರು ವಾಗ, ದೇವರು ಆಕಾಶವನ್ನು ತೆರೆದು ತನ್ನ ಪ್ರೀತಿಯನ್ನು ತನ್ನ ಮಗನೊಂದಿಗೆ ಸಾರಿದನು. ಯೇಸುವಿನ ದೀಕ್ಷಾಸ್ನಾನದಲ್ಲಿ ದೇವತ್ವದ ಮೂರು ಸದಸ್ಯರುಗಳು ಹಾಜರಾಗಿರುವ ತ್ರೈಯೇಕತ್ವವನ್ನು ನಿರಾಕರಿಸುವವರಿಗೆ ಜಯಿಸಲಾರದ ಅಂಶವಾಗಿದೆ. ಸತ್ಯವೇದದಲ್ಲಿ, "ತ್ರೈಯೇಕತ್ವ" ಎನ್ನುವ ಶಬ್ದ ಉಪಯೋಗ ಮಾಡದೆ ಇದ್ದರೂ, ಅನೇಕ ವಾಕ್ಯಗಳು ಈ ವಿಷಯವನ್ನು ಮೌಲ್ಯಯುತವಾದದೆಂದು, ನ್ಯಾಯ ಸಮ್ಮತವೆಂದು ನಿಶ್ಚಯಿಸುತ್ತವೆ (28:19; ಯೋಹಾನ 1:1-3, 14; 17:1-26; 2 ಕೊರಿಂಥ 13:14; ಯೂದ 20, 21; ನೋಡಿರಿ ಮಾರ್ಕ 12:29). ಯೇಸು ದೇವರಾಗಿದ್ದನು ಆದರೆ ಆತನು ಮಾನವನಾಗಿ ನಮ್ಮ ಮಧ್ಯೆದಲ್ಲಿ ವಾಸಮಾಡಿದ್ದನು (ಯೋಹಾನ 1:1, 14).

## ಪಾಠಗಳು

## ಯೇಸುವಿನ ದೀಕ್ಷಾಸ್ನಾನ (3:13-17)

ಈ ಕೆಳಗಿನ ಅಂಶಗಳಿಂದ ಯೇಸುವಿನ ದೀಕ್ಷಾಸ್ನಾನದ ಮೇಲೆ ಒಂದು ಪಾಠವನ್ನು ಸಿದ್ಧಪಡಿಸಬಹುದು:

1. ದೈವಿಕ ನಿರ್ಧಾರ (3:13, 14);
2. ದೈವಿಕ ಉದ್ದೇಶ (3:15);
3. ದೈವಿಕ ಸಾಕ್ಷಿ (3:16);
4. ದೈವಿಕ ಪ್ರಸನ್ನತೆ (3:17).

## ಯೇಸುವಿನ ದೀಕ್ಷಾಸ್ನಾನ ಮತ್ತು ನಮ್ಮ ಸ್ವಂತ ದೀಕ್ಷಾಸ್ನಾನ (3:13-17)

ಯೇಸು, ಆತನ ದೀಕ್ಷಾಸ್ನಾನದಲ್ಲಿ, ಇಂದು ನಮಗೆ ಮಾದರಿಯಾಗಿದ್ದಾನೆಂದು ಹಲವು ಸಾರಿ ಚರ್ಚಿಸಲಾಗಿದೆ. ಇದರ ವಿಷಯದಲ್ಲಿ ಕೆಲವು ಸತ್ಯಾಂಶವು ಇದ್ದಾಗ್ಯೂ, ಈ ವಿಷಯದಲ್ಲಿ ಅನೇಕ ಗೊಂದಲಗಳು ಮತ್ತು ಕಷ್ಟಕರವಾದ ಮೌಲ್ಯಮಾಪನವು ಮಾಡಲಾಗಿದೆ.

ಇಂದಿನ ದೀಕ್ಷಾಸ್ನಾನಕ್ಕೂ ಮತ್ತು ಯೇಸುವಿನ ದೀಕ್ಷಾಸ್ನಾನಕ್ಕೂ ಕೆಲವು ಹೋಲಿಕೆಗಳನ್ನು ನಾವು ಕಾಣಬಹುದು, ಹೊಸ ಒಡಂಬಡಿಕೆಯಲ್ಲಿ ನಿರ್ದರಿಸಿದಂತೆ, ಇಲ್ಲಿಯವರೆಗೆ ಅದು ಸಂಪೂರ್ಣವಾಗಿ ನೀರಿನಲ್ಲಿ ಮುಳುಗುವಂಥದ್ದಾಗಿದೆ ಮತ್ತು ಇನ್ನೊಬ್ಬರಿಂದ ಮಾಡಿಸುವಂಥದ್ದಾಗಿದೆ (ಸ್ವಂತವಾಗಿ ಮುಳುಗುವದಕ್ಕೆ ವಿರುದ್ಧವಾದದ್ದು) ಇನ್ನೂ, ಯೇಸು ಮಾಡಿದಂತೆಯೆ ಒಬ್ಬನಲ್ಲಿ ನಿಷ್ಕಪಟವಾದ ಆಸೆಯಿಂದ ದೇವರಿಗೆ ವಿಧೇಯ ನಾಗಬೇಕು. ಇದರ ಆಚೆಯಲ್ಲಿ, ಯಾವಾಗ ಒಬ್ಬನು ಹೊಸ ಒಡಂಬಡಿಕೆ ಪ್ರಕಾರ ಇಂದು ದೀಕ್ಷಾಸ್ನಾನ ಪಡೆಯುತ್ತಾನೋ, ಆಗ ಅವನು ಪವಿತ್ರಾತ್ಮನ ಧಾನವನ್ನು ಹೊಂದುವನು (ಅಪೊಸ್ತಲರ ಕೃತ್ಯಗಳು 2:38) - ಆದಾಗ್ಯೂ ಅದ್ಭುತವಿಲ್ಲವೆಂದು ಗಣನೆಗೆ ತೆಗೆದುಕೊಂಡರೂ - ಅವನು ದೇವರ ಮಗನಾಗಿದ್ದಾನೆಂದು ಪ್ರಕಟಿಸಲಾಗುತ್ತದೆ (ಗಲಾತ್ಯ 3:26, 27).[6] ಸ್ವಂತ ಯೇಸುವೇ ಪವಿತ್ರಾತ್ಮನಿಂದ ಅಭಿಷೇಕ ಹೊಂದಿದನು ಮತ್ತು ತಂದೆಯಿಂದ ಈತನು ದೇವರ ಕುಮಾರನೆಂದು ದೃಢಪಡಿಸಲಾಗಿದೆ. ಯೇಸುವಿನ ದೀಕ್ಷಾಸ್ನಾನ ಮತ್ತು ಹೊಸ ಒಡಂಬಡಿಕೆಯ ದೀಕ್ಷಾಸ್ನಾನವು ಇವೆರಡು ಸಹ ದೇವರ ಸೇವೆಗೆ ಪ್ರಾರಂಭದ ಅಂಶಗಳಾಗಿವೆ ಎಂದು ಅವಲೋಕಿಸಲಾಗಿದೆ.

ಅಲ್ಲಿ ಅನೇಕ ಹೋಲಿಕೆಗಳು ಇದ್ದರೂ, ಅದೇ ಪ್ರಕಾರ ವ್ಯತ್ಯಾಸಗಳು ಸಹ ಇವೆ. ಯೇಸು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡನು, ಪೂರ್ವಸಿದ್ಧತೆಯ ದೀಕ್ಷಾಸ್ನಾನ ಬಹಳ ಕಾಲ ನಗಣ್ಯವಾಗಿರುವಂಥದ್ದು ಆಗಿದೆ (ಅಪೊಸ್ತಲರ ಕೃತ್ಯಗಳು 19:1-7). ಕ್ರಿಸ್ತನು ಶಿಲುಬೆ ಮೇಲೆ ಮರಣ ಹೊಂದಿದ್ದರಿಂದ ಹೊಸ ನಿಬಂಧನೆಯನ್ನು ಸ್ಥಾಪಿಸುತ್ತಿದ್ದಾನೆ. ಆದುದರಿಂದ ಹೊಸ ಒಡಂಬಡಿಕೆಯ ದೀಕ್ಷಾಸ್ನಾನವು ಕ್ರೂಜೆಯಲ್ಲಿ ನಂಬಿಕೆ ಮತ್ತು ಕರ್ತನ ಪುನರುತ್ಥಾನದಲ್ಲಿ ನಂಬಿಕೆ ಒಳಗೊಂಡಿದೆ (ಮಾರ್ಕ 16:16). ಇದಕ್ಕೆ ಪಶ್ಚಾತ್ತಾಪ ಹೊಂದುವ ಅವಶ್ಯಕತೆಯು ಸಹ ಇದೆ, ಆತನು ಪಾಪರಹಿತನಾಗಿದ್ದರಿಂದ ಕ್ರಿಸ್ತನ ಮೇಲೆ ಯಾವುದೇ ಅಪ್ಪಣೆ ಮಾಡಲಿಲ್ಲ. ಪಶ್ಚಾತ್ತಾಪಪಡುವ ಒಬ್ಬ ವಿಶ್ವಾಸಿ ತನ್ನ ಎಲ್ಲಾ ಪಾಪಗಳು ಕ್ಷಮಿಸಲ್ಪಡುವದಕ್ಕಾಗಿ ಮತ್ತು ಕ್ರಿಸ್ತನ ರಕ್ತದಿಂದ ತೊಳೆಯಲ್ಪಡುವದಕ್ಕಾಗಿ ಹೊಸ ಒಡಂಬಡಿಕೆಯ ದೀಕ್ಷಾಸ್ನಾನಕ್ಕೆ ಒಪ್ಪಿಸಿಕೊಡಬೇಕು (ಅಪೊಸ್ತಲರ ಕೃತ್ಯಗಳು 2:38; 22:16; ನೋಡಿರಿ ಪ್ರಕಟಣೆ 1:5). ಆ ಕಾರ್ಯದಲ್ಲಿ ಕ್ರಿಸ್ತನ ಮರಣ ಮತ್ತು ಪುನರುತ್ಥಾನಗಳನ್ನು ಆತನು ವರ್ಣಿಸುತ್ತಾನೆ (ರೋಮಾಪುರ 6:3, 4). ಆತನು ಕ್ರಿಸ್ತನಲ್ಲಿ ಹೊಸ ವ್ಯಕ್ತಿಯಾಗುತ್ತಾನೆ (ರೋಮಾಪುರ 6) ಮತ್ತು ಕ್ರಿಸ್ತನಿಂದ ಆತನು ದೇವರ (ಸಭೆ) ರಾಜ್ಯಕ್ಕೆ ಸೇರಿಸಲ್ಪಡುತ್ತಾನೆ (ಅಪೊಸ್ತಲರ ಕೃತ್ಯಗಳು 2:47; ನೋಡಿರಿ 1 ಕೊರಿಂಥ 12:13).

ಪ್ರತಿಯೊಬ್ಬ ವ್ಯಕ್ತಿಯು ಕ್ರಿಸ್ತನಿಗೆ ಒಪ್ಪಿಸಿಕೊಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳುವದನ್ನು ಅನುಕರಿಸಬೇಕು, ಹೊಸ ಒಡಂಬಡಿಕೆಯ ದೀಕ್ಷಾಸ್ನಾನದ ವ್ಯತ್ಯಾಸವುಳ್ಳ ಅರ್ಥದ ಕುರಿತು ಸಲಹೆಗಳನ್ನು ಹೊಂದಬೇಕು. ಯೇಸು ಹೊಂದಿದ ದೀಕ್ಷಾಸ್ನಾನ ಮತ್ತು ಹೊಸ ಒಡಂಬಡಿಕೆಯ ದೀಕ್ಷಾಸ್ನಾನ ಒಂದೇ ಆಗಿರುವದಿಲ್ಲ.

---

**ಟಿಪ್ಪಣಿಗಳು**

[1]Donald A. Hagner, *Matthew 1-13*, Word Biblical Commentary, vol. 33A (Dallas: Word Books, 1993), 55. [2]Douglas R. A. Hare, *Matthew*, Interpretation (Louisville: John Knox Press, 1993), 20. [3]ಮೆನ್‌ಡೇನಿಯನ್ ತತ್ವವು ಹಿಂದಿನ ಇರಾಕ್ ಮತ್ತು ಇರಾನ್ ಪ್ರದೇಶದಲ್ಲಿ ಬಳಕೆಯಲ್ಲಿದೆ. ಅದು ಕ್ರಿ.ಶ. 2ನೇ ಶತಮಾನದಲ್ಲಿನ ಪ್ರಾಚೀನ ನಾಸ್ಟಿಕ್ ಮತವಾಗಿದೆ. ಮೆನ್‌ಡೇನಿಯನ್ ಯೆಹೂದ್ಯ ಮತ್ತು ಪಾರಂಪಾರ್ಯದ ಕ್ರೈಸ್ತತ್ವವನ್ನು ತಿರಸ್ಕರಿಸಿದರು, ಆದರೆ ದೀಕ್ಷಾಸ್ನಾನ ಯೋಹಾನನು ಪ್ರವಾದಿಯೆಂದು ಹೊಗಳಿಕೊಳ್ಳುತ್ತಾರೆ. ಅವರ ಮತವು ಮೂಢನಂಬಿಕೆ, ಬಹಳವಾದ ಆಚಾರಗಳು ಬಹಳ ತತ್ವಗಳನ್ನು ಹೊಂದಿವೆ. [4]G. F. Hasel, "Dove," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:988. [5]KJVನಲ್ಲಿ "ದೇವತ್ವ" ಎಂಬ ಗ್ರೀಕ್ ಪದವನ್ನು ಭಾಷಾಂತರಿಸಿದೆ (ಅಪೊಸ್ತಲರ ಕೃತ್ಯಗಳು 17:29; ರೋಮಾಪುರ 1:20; ಕೊಲಸ್ಸೆ 2:9). [6]Anthony Lee Ash, *The Gospel According to Luke*, Part 1, The Living Word Commentary (Austin, Tex.: Sweet Publishing Co., 1972), 77.